

# ಚಂದನವನದ ವಾಮನ

## ಕನಸುಗಾರ: ನಂ. 1

ದ್ವಾರಕೀಶ್ (ಆಗಸ್ಟ್ 19, 1942 – ಏಪ್ರಿಲ್ 16, 2024) ಕನ್ನಡ ಚಿತ್ರರಂಗದ ವಿಶಿಷ್ಟ ನಗೆಗಾರನಷ್ಟೇ ಅಲ್ಲ; ಮೊದಲ ಕನಸುಗಾರನೂ ಹೌದು. ದಶಕಗಳ ಕಾಲ ಮುಕ್ಕಾಗದೆ ಉಳಿದಿದ್ದ ಅವರ ಸಿನಿಮಾಪ್ರೀತಿಯಲ್ಲಿ ಕನ್ನಡ ಚಿತ್ರರಂಗದ ಏಳುಬೀಳುಗಳ ಚಿತ್ರಗಳೂ ಇವೆ.

■ ರಚಹ

ಕರ್ನಾಟಕದ ನಕ್ಷೆಯ ನಡುವೆ ಮುಖವೊಂದು ತೂರಿಬಂದು ಗಹಗಹಿಸಿ ನಗುತ್ತದೆ. ಒಂದೆರಡು ಕ್ಷಣಗಳ ಈ ‘ಕನ್ನಡ ನಗು’ ಹಲವು ದಶಕಗಳ ಕಾಲ ಸಿನಿಮಾ ಪರದೆಗಳನ್ನು, ಸಹೃದಯರ ಮನಸ್ಸುಗಳನ್ನು ಆವರಿಸಿಕೊಂಡಿತ್ತು. ಆ ನಗು, ದ್ವಾರಕೀಶ್ ಸಿನಿಮಾಪ್ರೀತಿಯ ದ್ಯೋತಕ. ಆ ನಗು ದ್ವಾರಕೀಶ್ ತಮ್ಮನ್ನು ತಾವು ಎಗತಾಳಿ ಮಾಡಿಕೊಳ್ಳುವಂತಹದ್ದೂ ಹೌದು, ನೋಡುಗರ ಮುಖದ ಬಿಗುಗಳನ್ನು ಸಡಿಲಿಸುವ ಪ್ರಯತ್ನವೂ ಹೌದು. ತನ್ನನ್ನು ‘ಕುಳ್ಳ’ ಎಂದು ಕರೆದುಕೊಳ್ಳುತ್ತಲೇ ಚಿತ್ರರಸಿಕರ ಮನಸ್ಸಿನಲ್ಲಿ ಸ್ಥಾನ ಪಡೆದುಕೊಂಡ ಸಾಧನೆ ಅವರದ್ದು.

ಕನ್ನಡ ಸಿನಿಮಾ ಸಂದರ್ಭದಲ್ಲಿ ‘ಕನಸುಗಾರ’ ಎನ್ನುವ ವಿಶೇಷಣವನ್ನು ರವಿಚಂದ್ರನ್ ಅವರಿಗೆ ಬಳಸಲಾಗುತ್ತದೆ. ಈ ವಿಶೇಷಣ ದ್ವಾರಕೀಶ್ ಅವರಿಗೂ ಚೆನ್ನಾಗಿ ಹೊಂದುತ್ತದೆ. ಕನಸುಗಳಿಲ್ಲದೆ ಯಾವುದೇ ಸಿನಿಮಾ ರೂಪುಗೊಳ್ಳುವುದಿಲ್ಲವಾದರೂ,